ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರ ಪರವಾಗಿ).— ಅಧ್ಯಕ್ಷರೇ, ಸ್ವಯಂ ಉದ್ಯೋಗ ಯೋಜನೆಯಂ ಕೆಳಗೆ ವಿದ್ಯಾವಂತ ನಿರುದ್ಯೋಗಿಗಳಿಂದ ೮೬-೮೭ರಲ್ಲಿ ಸಂಮಾರು ೮೨,೮೭೧ ಅರ್ಜಿಗಳಂ ಬಂದಿವೆಯೆಂದು ಹೇಳಿದ್ದಾರೆ. ಮತ್ತು ೮೩-೮೪ರಲ್ಲಿ ೮೨,೫೨೨ ಎಂದು ಹೇಳಿದ್ದಾರೆ.

೧೧-೩೦ ಎ.ಎಂ,

೧೯೮೪-೮೫ರಲ್ಲಿ ಅಪ್ಲಾಕ್ಸಿಮೇಟಾಗಿ ೬೦ ಸಾವಿರ ಎಂದು ಹೇಳಿದ್ದೀರಿ. ೧೯೮೫-೮೬ರಲ್ಲಿ ೫೭ಸಾವಿರ ಎಂದು ಹೇಳಿದ್ದೀರಿ. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು ಎಷ್ಟು ಮಂದಿ ಇದ್ದಾರೆ ? ಮಹಿಳೆಯರು ಎಷ್ಟು ಮಂದಿ ಇದ್ದಾರೆ ಎನ್ನುತಕ್ಕಂಥ ವಿವರ ಕೊಡಬೇಕು. ೨ನೆಯದಾಗಿ, ಸಂಮಾರು ೯,೨೪೦ ಲಕ್ಷ ರೂಪಾಯಿಗಳನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದೇವೆಂದು ಹೇಳಿದ್ದೀರಿ. ಇದನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಬೆಂಗಳೂರು ಯೂನಿವರ್ಸಿಟಿಯವರಿಗೆ ಪಹಿಸಿ, ವಿಚಾರಣೆ ಮಾಡಿಸಿ ಎಷ್ಟರಮಟ್ಟಿಗೆ ಇದು ಸದುಪಯೋಗವಾಗಿದೆ ಎಂಬ ವರದಿಯನ್ನು ತರಿಸುತ್ತೇವೆಂದೂ ಹೇಳಿದ್ದೀರಿ. ಈವರೆಗೆ ಇವರಿಂದ ವರದಿಯನ್ನು ಏನಾದರೂ ತರಿಸಿದ್ದೀರಾ? ಇದರ ಬಗ್ಗೆ ಅಧ್ಯಯನ ನಡೆದಿದೆಯೇ, ಎಷ್ಟು ಜನರು ಪ್ರಯೋಜನ ಪಡೆದುಕೊಂಡಿದ್ದಾರೆ ಎಂಬುದನ್ನು ತಾವು ಹೇಳುತ್ತೀರಾ ?

ಶ್ರೀ ಬಿ. ಎ. ಜೀವಿಜಯ.— ಅಧ್ಯಕ್ಷರೇ, ಪರಿಶಿಷ್ಟ ಜನಾಂಗಕ್ಕೆ ಶೇಕಡ ೩೦ರಷ್ಟು ಮೀಸಲಾತಿ ಇದೆ. ಉಪಯೋಗ ಮಾಡಿಕೊಂಡಿರುವವರ ನಿಖರವಾದ ಅಂಕಿಅಂಶ ಇಲ್ಲ. ಮಹಿಳೆಯರ ಬಗ್ಗೆ ಈಗಾಗಲೇ ವೇದಾಂತ ಹೆಮ್ಮಿಗೆ ಅವರಿಗೆ ಉತ್ತರ ಕೊಡುತ್ತಾ ಹೇಳಿದ್ದೇನೆ. ನಮಗೆ ಇನ್ನು ವಿಶ್ವವಿದ್ಯಾನಿಲಯ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಿಂದ ವರದಿ ಬಂದಿಲ್ಲ. ಆ ವರದಿ ಬಂದಕೂಡಲೇ ತಮಗೆ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಕೇಳುವ ಉದ್ದೇಶ ಇಷ್ಟೆ. ಇದು ಶ್ರೀಮತಿ ನಾಗರತ್ನಮ್ಮನವರ ಪ್ರಶ್ನೆ. ಅವರು ಯಾವಾಗಲೂ ಪ್ರಶ್ನೆ ಕೇಳುವುದಿಲ್ಲ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರ ಅಂಕಿಅಂಶ ಇಲ್ಲ ಎಂದು ಹೇಳಿದರೆ ಹೇಗೆ ? ನೀವು ಇವರಿಗಾಗಿ ೧೮ ಪರ್ಸೆಂಟ್ ೨೦ ಪರ್ಸೆಂಟ್ ರಿಸರ್ವೇಷನ್ ಇಡುತ್ತೀರಿ. ಇಷ್ಟೊಂದು ಹಣ ಖರ್ಚು ಮಾಡಿದ್ದೀರಿ, ಎಷ್ಟು ಜನರಿಗೆ ಇದರಿಂದ ಸಹಾಯ ಸಿಕ್ಕಿದೆ ಎಂಬ ಮಾಹಿತಿಯನ್ನೂ ಹೇಳಬೇಕು.

ಶ್ರೀ ಬಿ. ಎ. ಜೀವಿಜಯ.—ಈಗಾಗಲೇ ೩೦ರಷ್ಟು ಮೀಸಲಾತಿ ಈ ಜನಾಂಗಕ್ಕೆ ಇದೆ. ಇದನ್ನು ಹೆಚ್ಚು ಕಡಿಮೆ ಕೊಡುತ್ತಾ ಬಂದಿದ್ದೇವೆ. ಮಹಿಳೆಯರ ಬಗ್ಗೆ ಅಂಕಿ ಅಂಶ ಕೇಳಿದ್ದೀರಿ. ನಮಗೆ ಅದರಿಂದ ವರದಿ ಬಂದಿಲ್ಲ. ಬಂದಕೂಡಲೇ ತಮಗೆ ಕಳುಹಿಸಿಕೊಡುತ್ತೇನೆ.

ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆಯ ಬಗ್ಗೆ

ಶ್ರೀ ಕೆ. ಪಿ. ಮಗಣ್ಣನವರ್ (ಸಡಲಗಾ).— ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ ?

ಅ) ಪ್ರತಿವರ್ಷ ಫೆಬ್ರುವರಿ ತಿಂಗಳಿನ ಒಂದನೇ ವಾರದಿಂದ ಜೂನ್ ತಿಂಗಳಿನ ಕೊನೆಯವಾರದ ವರೆಗೆ ಕೃಷ್ಣಾ ದೂಧಗಂಗಾ ನದಿಗಳ ದಡದಲ್ಲಿರುವ ಖಾಸಗೀ ನೀರಾವರಿ ಪಂಪುಸಟ್ಟುಗಳಿಗೆ ವಿದ್ಯುತ್ ಪೂರೈಕೆ ಮಾಡಬಾರದೆಂದು ಸರ್ಕಾರವು ಆದೇಶ ಹೊರಡಿಸಿರುವುದು ನಿಜವೇ ?

ಆ) ಇದರಿಂದ ರೈತರಿಗೆ ಅನಾನುಕೂಲವಾಗುವುದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ಅನೇಕ ಗ್ರಾಮಗಳು ಮತ್ತು ನಗರಗಳು ಮತ್ತೂ ದೊಡ್ಡ ಪಟ್ಟಣಗಳೂ ಸಹ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವಕ್ಕೆ ಒಳಗಾಗಿದ್ದುದರಿಂದ ರಾಜ್ಯ ಮಟ್ಟದ ಸಣ್ಣ ನೀರಾವರಿ ಸಮನ್ವಯ

ಸಮಿತಿಯು ಸಭೆಯಲ್ಲಿ ನದಿಗಳಿಂದ ಪ್ರತಿ ವರ್ಷವು ಬೇಸಿಗೆ ಕಾಲದಲ್ಲಿ (ಫೆಬ್ರುವರಿಯಿಂದ ಜೂನ್ ಕೊನೆಯ ವರೆಗೆ) ನೀರಾವರಿಗೆ ನೀರನ್ನು ಎತ್ತುವುದನ್ನು ನಿಷೇದಿಸಬೇಕೆಂದು ನಿರ್ಧರಿಸಲಾಯಿತು. ಇಂತಹ ಗ್ರಾಮಗಳು ಮತ್ತು ನಗರಗಳಿಗೆ ಕುಡಿಯಲುವ ನೀರಿನ ಆಧಾವವು ಉಂಟಾಗದಿರಲೆಂಬ ಉದ್ದೇಶದಿಂದ ಇಂತಹ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬೇಕೆಂದು ಸಂತ್ರೋಲೆಯಲ್ಲಿ ಸೂಚನೆ ಕೊಡಲಾಯಿತು.

ಆ) ರೈತರಿಗೆ ಅನಾನುಕೂಲವಾಗುತ್ತದೆಂದು ಜನವಿಗಳು ಬಂದಿರುವುದರಿಂದ ಮತ್ತು ಕುಡಿಯುವ ನೀರಿನ ಲಭ್ಯತೆಯು ಸುಧಾರಿಸಿರುವುದರಿಂದಲೂ ಇಂತಹ ನದಿ ದಂಡೆಗಳ ಮೇಲಿನ ನೀರಾವರಿ ಪಂಪುಸೆಟ್ಟುಗಳಿಗೆ ೧೯೮೮ನೇ ಇಸವಿಯ ಬೇಸಿಗೆ ತಿಂಗಳುಗಳಲ್ಲಿ ವಿದ್ಯುತ್ ಸಂಪರ್ಕವನ್ನು ತೆಗೆದು ಹಾಕ ಬಾರದೆಂದು ವಿದ್ಯುತ್ ಮಂಡಳಿಯವರಿಗೆ ಸೂಚನೆ ಕೊಡಲಾಗಿದೆ.

ಶ್ರೀ ಕೆ. ಪಿ. ಮಗೆನ್ನವರ್.— ಮಾನ್ಯ ಅಧ್ಯಕ್ಷರೇ, ಹಾಗಾದರೆ ನಾನು ಸರ್ಕಾರಕ್ಕೆ ರೈತರ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ಅಥಣಿ ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ

೩೮೮. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಥಣಿ ವಿಧಾನ ಸಭಾ ಕ್ಷೇತ್ರದಿಂದ ಸಹಕಾರೀ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಲಾಗಿದೆಯೇ, ಯಾವಾಗ ಹಾಗೂ ಯಾರಿಂದ ?

ಆ) ಈ ಕಾರ್ಖಾನೆ ಸ್ಥಾಪನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆಯೇ, ನೀಡಿದ್ದರೆ ಅದು ಈಗ ಯಾವ ಹಂತದಲ್ಲಿದೆ ?

ಇ) ಅಥಣಿ ತಾಲ್ಲೂಕಿನಲ್ಲಿ ಎಷ್ಟು ಸಹಕಾರೀ ಕಾರ್ಖಾನೆಗಳಿವೆ ?

ಈ) ತಾಲ್ಲೂಕಿನಲ್ಲಿ ಬೆಳೆಯಂತ್ತಿರುವ ಕಬ್ಬಿನ ಪ್ರಮಾಣವೇನು ?

ಉ) ಕಳೆದ ೩ ವರ್ಷಗಳಲ್ಲಿ (೧೯೮೭ರ ಡಿಸೆಂಬರ್ ಅಂತ್ಯದವರೆಗೆ) ಈ ಬೆಳೆಯನ್ನು ಎಷ್ಟು ಎಕರೆ ಗಳಲ್ಲಿ ಬೆಳೆಸಲಾಗುತ್ತಿದೆ ?

ಊ) ಅಥಣಿ ತಾಲ್ಲೂಕಿನಲ್ಲಿರುವ ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯ ಎಷ್ಟು?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿ ಗಳು) —

ಅ) ಹೌದು. ಶ್ರೀ ಆರ್. ವಿ. ಜೋತಿಯವರು ದಿನಾಂಕ ೨೬.೩.೧೯೮೭ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಆ) ಅರ್ಜಿಯನ್ನು ಭಾರತ ಸರ್ಕಾರಕ್ಕೆ ಶಿಫಾರ್ಸು ಮಾಡಲಾಗಿದೆ.

ಇ) ಸಹಕಾರೀ ರಂಗದಲ್ಲಿ ಸದ್ಯದಲ್ಲಿ ಯಾವ ಸಕ್ಕರೆ ಕಾರ್ಖಾನೆಯು ಈ ತಾಲ್ಲೂಕಿನಲ್ಲಿ ಇಲ್ಲ.

ಈ) ಕಬ್ಬಿನ ಪ್ರಮಾಣ ೧೫ ಲಕ್ಷ ಟನ್‌ಗಳೆಂದು ಅಂದಾಜು ಮಾಡಲಾಗಿದೆ.

ಉ) ಸುಮಾರು ೨೦ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಳಸಲಾಗುತ್ತಿದೆ.

ಊ) ಖಾಸಗಿ ಕ್ಷೇತ್ರದಲ್ಲಿ ಸ್ಥಾಪಿತವಾಗಿರುವ ಉಗರ್ ಸಕ್ಕರೆ ಕಾರ್ಖಾನೆ ಮಾತ್ರ ಇದ್ದು ಇದರ ಕಬ್ಬು ಅರೆಯುವ ಸಾಮರ್ಥ್ಯ ದಿನಂಪ್ರತಿ ೫೦೦೦ ಮೆ ಟನ್ ಮಾತ್ರ ಆಗಿದೆ.

ಶ್ರೀಮತಿ. ಲೀಲಾದೇವಿ. ಆರ್. ಪ್ರಸಾದ್,—ಮಾನ್ಯ ಅಧ್ಯಕ್ಷರೇ, ಬಹಳ ವರ್ಷಗಳ ನಂತರ ಅಥಣಿ ಮತ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ವಿಚಾರದಲ್ಲಿ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರ ಬಗ್ಗೆ ಸೆಂಟ್ರಲ್